**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/22/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 12.07.2013

**ಆದೇಶ**

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಿಕೆ – ದಿನಾಂಕ 3-7-2013 ರಂದು ಹೊರಡಿಸಲಾದ ಅಧಿಸೂಚನೆಗೆ ಮಾರ್ಪಾಡು ಮಾಡುವ ಕುರಿತು.

**ಉಲ್ಲೇಖ:-**
1) ಸಹಕಾರ ಚುನಾವಣಾ ಆಯೋಗದ ಅಧಿಸೂಚನೆ ಸಂ:ಸಚುಆ/ಚುನಾವಣೆ/22/2013-14 ದಿನಾಂಕ:3-7-2013
2) ಸಂ:ಸಚುಆ/ಚುನಾವಣೆ/22/2013-14 ದಿನಾಂಕ:10-7-2013ರ ಚೆಕ್‌ಲಿಸ್ಟ್

***

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಆಡಳಿತ ಮಂಡಳಿ ಚುನಾವಣೆ ನಡೆಸುವ ಕುರಿತು ಉಲ್ಲೇಖಿತ ಅಧಿಸೂಚನೆಯಲ್ಲಿ ಚುನಾವಣಾ ದಿನಾಂಕಗಳನ್ನು ನಿಗದಿಪಡಿಸಲಾಗಿತ್ತು. ಸದರಿ ಅಧಿಸೂಚನೆಯಲ್ಲಿ ಕ್ರಮಸಂಖ್ಯೆ 3 ಅಂದರೆ ಇತರೆ ಸಹಕಾರ ಸಂಘಗಳು (ಕೃಷಿಯೇತರ ಪತ್ತಿನ ಸಂಘಗಳು, ಅರ್ಬನ್ ಬ್ಯಾಂಕುಗಳು ಮತ್ತು ಇತರೆ ಪತ್ತಿನ ಸಹಕಾರ ಸಂಘಗಳಿಗೆ) ಸಂಬಂಧಿಸಿದಂತೆ ಚುನಾವಣೆ ನಡೆಸಬೇಕಾದ ದಿನಾಂಕ 8-9-2013 ಎಂದು ಗೊತ್ತುಪಡಿಸಲಾಗಿತ್ತು. ಈ ವರ್ಗದ ಸಂಘಗಳಿಗೆ ಈ ಕೆಳಕಂಡಂತೆ ಮಾರ್ಪಾಡು ಮಾಡಿ ಚುನಾವಣೆ ದಿನಾಂಕವನ್ನು ನಿಗದಿಪಡಿಸಿ ಆದೇಶಿಸಿದೆ.

| ಕ್ರಸಂ | ಪ್ರಾಥಮಿಕ ಸಹಕಾರ ಸಂಘಗಳು | ಚುನಾವಣೆ ನಡೆಸಬೇಕಾದ ದಿನಾಂಕ |
|---|---|---|
| 3 | ಇತರೆ ಸಹಕಾರ ಸಂಘಗಳು (ಕೃಷಿಯೇತರ ಪತ್ತಿನ ಸಂಘಗಳು, ಅರ್ಬನ್ ಬ್ಯಾಂಕುಗಳು ಮತ್ತು ಇತರೆ ಪತ್ತಿನ ಸಂಘಗಳು) | 07-09-2013<br>08-09-2013 |

ಮೇಲ್ಕಂಡ ಕ್ರಮಸಂಖ್ಯೆ 3 ರ ವರ್ಗದ ಸಹಕಾರ ಸಂಘಗಳನ್ನು ಹೊರತುಪಡಿಸಿ ಉಳಿದಂತೆ ಯಾವ ಬದಲಾವಣೆಯೂ ಇರುವುದಿಲ್ಲ. ಮೇಲ್ಕಂಡ ಬದಲಾವಣೆಯೊಂದಿಗೆ ಉಲ್ಲೇಖಿತ ಅಧಿಸೂಚನೆ ಮುಂದುವರಿಯುತ್ತದೆ ಎಂದು ಈ ಮೂಲಕ ಆದೇಶಿಸಿದೆ. ಅಲ್ಲದೆ, ಈ ಸಂಬಂಧ ಉಲ್ಲೇಖ (2) ರಲ್ಲಿ ಹೊರಡಿಸಲಾದ ಚೆಕ್‌ಲಿಸ್ಟ್ ಕ್ರಮಸಂಖ್ಯೆ 4 ರಲ್ಲಿ 8-9-2013 ಕ್ಕೆ ಬದಲಾಗಿ 7-9-2013 / 8-9-2013 ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ :**

1. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

2. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ ಪ್ರಾಂತ.
3. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ________________
   (ಸಂಬಂಧಿಸಿದ ಸಂಘಗಳಿಗೆ ಈ ಬಗ್ಗೆ ಸೂಕ್ತ ಸೂಚನೆ ನೀಡಲು ಕೋರಿದೆ.)
4. ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ,__________ (ಸಂಬಂಧಿಸಿದ ಸಂಘಗಳಿಗೆ ಈ ಬಗ್ಗೆ ಸೂಕ್ತ ಸೂಚನೆ ನೀಡಲು ಕೋರಿದೆ.)
5. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ____________
6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ.,

   ____________________

**ಪ್ರತಿಯನ್ನು ಮಾಹಿತಿಗಾಗಿ:-**

1) ಜಿಲ್ಲಾಧಿಕಾರಿಗಳು, ________________ ಜಿಲ್ಲೆ ______________

2) ಆರಕ್ಷಕ ಅಧೀಕ್ಷಕರು, ________________ ಜಿಲ್ಲೆ ______________